**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಗೊಟ್ಟಿಗೆರೆ ವಾರ್ಡ್ ಸಂಖ್ಯೆ-194,**

**ವಾರ್ಡ್ ಕಛೇರಿಯಲ್ಲಿ ದಿನಾಂಕ: 06–02–2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

ದಿನಾಂಕ: 06–02–2021 ರಂದು ಮಧ್ಯಾಹ್ನ 03:00 ಘಂಟೆಗೆ ನಡೆಸಲಾದ ವಾರ್ಡ್ ಸಮಿತಿ ಸಭೆಯಲ್ಲಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ದಿನಾಂಕ: 16–01–2020 ರಂದು ನಡೆದ ಸಭೆಯಲ್ಲಿ ಚರ್ಚಿಸಿಲಾದ ವಿಷಯಗಳು ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಕೆಳಕಂಡಂತೆ ಚರ್ಚಿಸಲಾಯಿತು.

ಸದರಿ ಸಭೆಗೆ ಈ ಕೆಳಕಂಡ ಸದಸ್ಯರು ಮತ್ತು ಅಧಿಕಾರಿ ವರ್ಗದವರು ಹಾಜರಾಗಿದ್ದರು.

1. ಶ್ರೀಮತಿ ವಿ.ಕೆ ರಮಾಮಣಿ, ಉಪ ಆಯುಕ್ತರು (ಮಾಹಿತಿ ತಂತ್ರಜ್ಞಾನ) ಹಾಗೂ ಅಧ್ಯಕ್ಷರು, ಗೊಟ್ಟಿಗೆರೆ, ವಾರ್ಡ್ ಸಮಿತಿ, ಬೊಮ್ಮನಹಳ್ಳಿ, ಬೆಂಗಳೂರು.
2. ಶ್ರೀ ರಮೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಾರ್ಯದರ್ಶಿ, ಗೊಟ್ಟಿಗೆರೆ, ವಾರ್ಡ್ ಸಮಿತಿ, ಬೊಮ್ಮನಹಳ್ಳಿ, ಬೆಂಗಳೂರು.
3. ಶ್ರೀ ಲಕ್ಷ್ಮಿಪತಿ, ವೈದ್ಯಾಧಿಕಾರಿಗಳು, ಗೊಟ್ಟಿಗೆರೆ.
4. ಶ್ರೀ ಕೃಷ್ಣ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೊಟ್ಟಿಗೆರೆ.
5. ಶ್ರೀ ಮಾರುತಿ, ಸಹಾಯಕ ಅಭಿಯಂತರರು, ಗೊಟ್ಟಿಗೆರೆ.
6. ಶ್ರೀ ರವಿ, ಸಹಾಯಕ ಅಭಿಯಂತರರು (ಬೆಸ್ಕಾಂ), ಗೊಟ್ಟಿಗೆರೆ.
7. ಶ್ರೀ ಹೆಚ್.ನರಸಪ್ಪ, ತೋಟಗಾರಿಕೆ ಇಲಾಖೆ. ಗೊಟ್ಟಿಗೆರೆ
8. ಶ್ರೀ ಜಗದೀಶ್, ಬೀದಿ ದೀಪ ನಿರ್ವಹಣೆ, ಗೊಟ್ಟಿಗೆರೆ
9. ಅಧ್ಯಕ್ಷರು, ಪರಿವರ್ತನ ಬಡಾವಣೆ, ಗೊಟ್ಟಿಗೆರೆ
10. ಅಧ್ಯಕ್ಷರು, ಸುರಭಿ ನಗರ, ಗೊಟ್ಟಿಗೆರೆ
11. ಅಧ್ಯಕ್ಷರು, ಹೆಚ್.ಎಮ್ ವರ್ಲ್ಡ್ ಸಿಟಿ. ಗೊಟ್ಟಿಗೆರೆ
12. ಅಧ್ಯಕ್ಷರು, ಜೆ.ಪಿ.ನಗರ 9ನೇ ಹಂತ. ಗೊಟ್ಟಿಗೆರೆ
13. ಅಧ್ಯಕ್ಷರು, ಐ.ಡಿ.ಬಿ.ಐ ಲೇಔಟ್, ಗೊಟ್ಟಿಗೆರೆ
14. ಅಧ್ಯಕ್ಷರು, ಪವಮಾನ ನಗರ, ಗೊಟ್ಟಿಗೆರೆ

Scanned by CamScanner

| (1) | ದಿನಾಂಕ: 16–02–2021ರ ಸಭೆಯಲ್ಲಿ ಚರ್ಚಿಸಲಾದ ವಿಷಯಗಳಿಗೆ ಸಂಬಂಧಪಟ್ಟಂತೆ ಅನುಪಾಲನಾ ವರದಿಯ ಬಗ್ಗೆ. | |
|---|---|---|
| | (i). ಕ್ಲಾಸಿಕ್ ಆರ್ಚಡ್ಸ್ ರಸ್ತೆ ಕಾಮಗಾರಿ ಪ್ರಗತಿಯ ಬಗ್ಗೆ. | ವಾರ್ಡ್ ಅಭಿಯಂತರರು ಸಂಬಂಧಪಟ್ಟ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಪ್ರಾರಂಭಿಸಲು ನೋಟೀಸ್ ನೀಡಿರುವುದಾಗಿ ಸಭೆಗೆ ತಿಳಿಸಿದರು. |
| | (ii) ಪಾವಮಾನ ನಗರ ಬಡಾವಣೆ ಹಾಗೂ H.M World City ಹತ್ತಿರದ 80 ಫೀಟ್ ರಸ್ತೆ ಹಾಗೂ 60 ಫೀಟ್ ರಸ್ತೆಗಳಲ್ಲಿ ಗೂನುಗಳನ್ನು (Humps) ನಿರ್ಮಾಣ ಮಾಡಲು ಕೋರಿರುತ್ತಾರೆ. | ಸಂಬಂಧಪಟ್ಟ ಸಂಚಾರ ಪೊಲೀಸರಿಗೆ ವಾರ್ಡ್ ಅಭಿಯಂತರರು ಪತ್ರ ವ್ಯವಹರಿಸಿ ಮುಂದಿನ ಸಭೆಯೊಳಗೆ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು. |
| | (iii) ರಾಯಲ್ ಕೌಂಟಿ ರಸ್ತೆ ಪಾದಚಾರಿಗಳಲ್ಲಿರುವ ವ್ಯಾಪರಸ್ಥರನ್ನು ತೆರುವುಗೊಳಿಸಿದ ನಂತರವು ಕೆಲ ವ್ಯಾಪಾರಸ್ಥರು ಪಾದ ಚಾರಿಯಲ್ಲಿ ಮರುಕಳಿಸುತ್ತಿದ್ದು ನಿಯಂತ್ರಗೊಳಿಸಲು ಕೋರಿರುತ್ತಾರೆ. | ಆರೋಗ್ಯ ಪರಿವೀಕ್ಷಕರು ಮುಂದಿನ ವಾರದಲ್ಲಿ ಮತ್ತೊಂದು ತೆರುವು ಕಾರ್ಯಚರಣೆಯನ್ನು ಕೈಗೊಳ್ಳುವುದಾಗಿ ತಿಳಿಸಿದರು. |
| | (iv) ಸುರಭಿ ನಗರದ ಮುನೇಶ್ವರ ದೇವಸ್ಥಾನದ ಪಕ್ಕ ಇರುವ ಹಿರಿಯ ನಾಗರೀಕರ ಉದ್ಯಾನವನವನ್ನು ದುರಸ್ಥಿಗೊಳಿಸುವ ಬಗ್ಗೆ. | ಉದ್ಯಾನವನದ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳಲು ಈಗಾಗಲೇ ಕಡತವನ್ನು ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಅನುಮೋದನೆ ಪಡೆಯಲು ತೋಟಗಾರಿಕೆ ಅಧೀಕ್ಷಕರು ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು. |
| | (v) ರಾಯಲ್ ಕೌಂಟಿ ಬಡಾವಣೆಯ ಖಾಲಿ ನಿವೇಶನದಲ್ಲಿ ಮರಳು ವ್ಯಾಪಾರ ಮಾಡುತ್ತಿರುವ ಬಗ್ಗೆ. | ಆರೋಗ್ಯ ಪರಿವೀಕ್ಷಕರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಗೆ ಪರಿಶೀಲಿಸಲು ಕೋರಿ ಕೂಡಲೇ ಪತ್ರ ಬರೆಯಲು ಸಭೆಯಲ್ಲಿ ಸೂಚಿಸಲಾಯಿತು. |
| | (vi) ಸೌತ್ ಅವೆನ್ಯೂ ಬಡಾವಣೆಯ ಕೆಲ ಮೂಲೆಗಳಲ್ಲಿ ಸಾರ್ವಜನಿಕರು ಕಸವನ್ನು ಎಸೆಯುತ್ತಿದ್ದು ಸದರಿ ಜಾಗೆಗಳನ್ನು ಸ್ವಚ್ಛಗೊಳಿಸಲು ಕೋರಿರುತ್ತಾರೆ. | ಆರೋಗ್ಯ ಪರಿವೀಕ್ಷಕರು ಇಂಟೆನ್ಸೀವ್ ಕ್ಲೀನಿಂಗ್ ಅನ್ನು ಕೈಗೊಂಡಿರುವುದಾಗಿ ಸಭೆಗೆ ತಿಳಿಸಿದರು. |
| | (vii) ವಾರ್ಡ್ ನಲ್ಲಿರುವ ಕೆರೆಯ ಬದಿಯಲ್ಲಿ ಎಸೆದಿರುವ ಘನತ್ಯಾಜ್ಯವನ್ನು ತೆರುವುಗೊಳಿಸಲು ಕೋರಿರುತ್ತಾರೆ. | ವಾರ್ಡ್ ಅಭಿಯಂತರರು ಸುಬ್ಬರಾಯನ ಕೆರೆ ಅಭಿವೃದ್ಧಿಗೊಳಿಸಲು ಕೋರಿ ಕೆರೆ ವಿಭಾಗದವರಿಗೆ ಪತ್ರ ಬರೆಯಲು ಸೂಚಿಸಲಾಯಿತು. |
| | (viii) ಅಧ್ಯಕ್ಷರು, ಹಿಮಗಿರಿ ಮೆಡೋಸ್ ರವರು ತಮ್ಮ ಬಡಾವಣೆಯ ಮುಖ್ಯ ರಸ್ತೆಯಲ್ಲಿ ಪಾಲಿಕೆಯು ಅಗಲವಾದ ರಸ್ತೆ ನೀರುಗಾಲುವೆ ಕಾಮಗಾರಿ ಕೈಗೊಂಡಿದ್ದು ಉಳಿಕೆ ರಸ್ತೆಯು ದುರಸ್ಥಿಗೊಂಡಿದ್ದು ತಗ್ಗಾಗಿರುತ್ತದೆ ಮತ್ತು Covering Slabs ಮಧ್ಯೆ ಅಂತರ ಉಂಟಾಗಿರುವ ಹಿನ್ನೆಲೆಯಲ್ಲಿ ಈಗಾಗಲೇ ಎರಡು ಅಪಘಾತಗಳು ಸಂಭವಿಸಿರುವ | ಮಳೆ ನೀರುಗಾಲುವೆ ಹಾಗೂ ಬೃಹತ್ ರಸ್ತೆ ಇಲಾಖೆಯ ಅಭಿಯಂತರರು ಸ್ಥಳ |

Scanned by CamScanner

| | | |
|---|---|---|
| | ಕಾರಣ ಕೂಡಲೇ ರಸ್ತೆ ಮತ್ತು ಚರಂಡಿ ಮೇಲೆ ಉಂಟಾಗಿರುವ ಅಂತರಗಳನ್ನು ಸರಿಪಡಿಸಲು ಕೋರಿರುತ್ತಾರೆ. ಮುಂದುವರೆದು, ಅಧ್ಯಕ್ಷರು, ಹಿಮಗಿರಿ ಮೆಡೋಸ್ ರವರು ಸದರಿ ಕಾಲುವೆ ನಿರ್ವಹಣೆ ಮಾಡುತ್ತಿರುವ ಸಮಯದಲ್ಲಿ ಸೆಕ್ಯೂರಿಟಿ ಕ್ಯಾಬಿನ್, ಕಾಂಪೌಂಡ್ ಗೋಡೆ, ಬಸ್ ನಿಲ್ದಾಣ, ಪಾದಚಾರಿ ಹಾಗೂ ಹಂಪ್ಸ್ ಅನ್ನು ತೆರುವುಗೊಳಿಸಿದ್ದು, ಇವುಗಳನ್ನು ಪುನರ್ ರಚಿಸಲು ಕೋರಿರುತ್ತಾರೆ. | ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು. |
| | **(xi)** ಗಂಗೋತ್ರಿ ಎಲಿಗೆನ್ಸ್ ಮುಂಭಾಗದ ಬೀದಿ ದೀಪಗಳನ್ನು ಸರಪಡಿಸಲು ಸ್ಥಳಿಯ ನಾಗರೀಕರು ಕೋರಿರುವ ಬಗ್ಗೆ. | ಸಭೆಯಲ್ಲಿ ಹಾಜರಿದ್ದ ಬೀದಿ ದೀಪ ನಿರ್ವಹಣೆಯ ಗುತ್ತಿಗೆದಾರರು ದುರಸ್ಥಿಪಡಿಸಿರುವುದಾಗಿ ಸಭೆಗೆ ತಿಳಿಸಿರುತ್ತಾರೆ. |
| **2.** | **ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕೈಗೊಂಡಿರುವ ಒಳಚರಂಡಿ ಹಾಗೂ ಕುಡಿಯುವ ನೀರಿನ ಕಾಮಗಾರಿಗಳ ಪ್ರಗತಿಯ ಬಗ್ಗೆ.** | |
| | **(i)** ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕುಡಿಯುವ ನೀರಿನ ಸಂಪರ್ಕ ಹಾಗೂ Booster Pump ಗಳನ್ನು BDA ಬಡಾವಣೆಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ಸಭೆಗೆ ಹಾಜರಾಗಿರುವುದಿಲ್ಲ ಹಾಗೂ ಅನುಪಾಲನಾ ವರದಿ ಸಲ್ಲಿಸಿರುವುದಿಲ್ಲ.<br><br>ಈಗಾಗಲೇ ಇದು ಮೂರನೇ ಬಾರಿ ಗೈರು ಹಾಜರಾಗಿದ್ದರು, ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸಲು ಕಷ್ಟಸಾಧ್ಯವಾಗುತ್ತಿದ್ದು, ಮುಂಬರುವ ಎಲ್ಲಾ ವಾರ್ಡ್ ಸಭೆಗಳಲ್ಲಿ ಕಡ್ಡಾಯವಾಗಿ ಹಾಜರಾಗಿ ಸಾರ್ವಜನಿಕರ ಕುಂದು ಕೊರತೆಗಳನ್ನು ಚರ್ಚಿಸಿ ನಿವಾರಣೆಗೊಳಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರಿಗೆ ಸೂಚಿಸಲು ಸಭೆಯ ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು. |
| | **(ii)** ಸೌತ್ ಅವೆನ್ಯೂ ಬಡಾವಣೆ, ನಂದಿ ಪಾರ್ಕ್ ರಸ್ತೆಯಲ್ಲಿ ಹಾಗೂ ಗಂಗೋತ್ರಿ ಎಲಿಗೆನ್ಸ್ ಅಪಾರ್ಟ್‌ಮೆಂಟ್ ಮುಂಭಾಗದಲ್ಲಿ ಒಳಚರಂಡಿ ನೀರು ರಸೆಯ್ತು ಮೇಲೆ ಹರಿಯುತ್ತಿದ್ದು, ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಗಾಗಿ ತ್ವರಿತವಾಗಿ ದುರಸ್ತಿಪಡಿಸಲು ಕೋರಿರುತ್ತಾರೆ. | |
| | **(iii)** EWS ಬಡಾವಣೆ ಯಿಂದ ರಾಯಲ್ ಕೌಂಟಿ ಬಡಾವಣೆಗೆ ಅನಧಿಕೃತವಾಗಿ ಚರಂಡಿ ಸಂಪರ್ಕವನ್ನು ಒದಗಿಸಿದ್ದು, ಸ್ಥಳ ಪರಿಶೀಲಿಸಿ ಚರಂಡಿ ಮಾರ್ಗವನ್ನು ಸರಿಪಡಿಸಲು ಕೋರಿರುತ್ತಾರೆ. | |
| | **(v) ಅಧ್ಯಕ್ಷರು,** ಐ.ಡಿ.ಬಿ.ಐ ಬಡಾವಣೆ ರವರು ತಮ್ಮ ಬಡಾವಣೆಯಲ್ಲಿ ಕೈಗೊಳ್ಳುತ್ತಿರುವ ಒಳಚರಂಡಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಕೋರಿರುತ್ತಾರೆ. | |
| | **(vi)** ಅಧ್ಯಕ್ಷರು, ಹಿಮಗಿರಿ ಮೆಡೋಸ್ ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಿಂದ ಈಗಾಗಲೇ ಕುಡಿಯುವ ನೀರಿನ ಸಂಪರ್ಕವನ್ನು ಒದಗಿಸಲಾಗಿರುತ್ತದೆ. ಆದರೆ ವಾರಕ್ಕೊಮ್ಮೆ ಕೇವಲ ಎರಡು ಘಂಟೆಗಳ ಕಾಲ ಕಡಿಮೆ ಒತ್ತಡದಿಂದ ನೀರನು, ಸರಬರಾಜು ಮಾಡುತಿರುವ | |

Scanned by CamScanner

<table>
<tr><td></td><td>ಕಾರಣ ಇದನ್ನು ಸರಿಪಡಿಸಲು ಕೋರಿರುತ್ತಾರೆ. ಮುಂದುವರೆದು ನೀರಿನ ಸಂಪರ್ಕ ಒದಗಿಸಿದ ಬಳಿಕ ಪಾಲಿಕೆಯು ಕೈಗೊಂಡ ರಸ್ತೆ ಪುನಃ ಸ್ಥಾಪನೆ ಕಾಮಗಾರಿಯ ಬಗ್ಗೆ ಮಾಹಿತಿ ನೀಡಲು ಕೋರಿರುತ್ತಾರೆ.</td><td></td></tr>
<tr><td>3.</td><td colspan="2">ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಹಾಗೂ ಸ್ಟ್ರೀಟ್ ಲೈಟ್ ವಿಷಯಗಳ ಬಗ್ಗೆ.</td></tr>
<tr><td></td><td>(i) ಸುರಭಿನಗರ, ರಾಯಲ್ ಕೌಂಟಿ ಬಡಾವಣೆ, ಆರ್ಯ ಹಂಸ ಗ್ರಾಂಡೆ ಮತ್ತು ಬಿ.ಡಿ.ಎ ಬಡಾವಣೆ ಗಳಲ್ಲಿ ವೋಲ್ಟೇಜ್ ಏರಿಳಿತ ದಿಂದ ವಿದ್ಯುತ್ ಸರಬರಾಜು ಅಡಚಣೆಗಳು ಉಂಟಾಗುತ್ತಿದ್ದು, ದುರಸ್ಥಿಪಡಿಲು ಕೋರಿರುತ್ತಾರೆ.</td><td rowspan="3">ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು (ಬೆಸ್ಕಾಂ) ರವರು ಸ್ಥಳ ಪರಿಶೀಲಿಸಿ ಅಗತ್ಯ ಕ್ರಮಕೈಗೊಂಡು ಅನುಪಾಲನಾ ವರದಿ ಸಲ್ಲಿಸಲು ಸೂಚಿಸಲಾಯಿತು.</td></tr>
<tr><td></td><td>(ii) ಹಿಮಗಿರಿ ಮೆಡೋಸ್ ಬಡಾವಣೆಯಲ್ಲಿ ಸ್ಥಾಪಿಸಿರುವ ಪ್ಯಾನಲ್ ಬೋರ್ಡ್‌ಗಳು ಸದಾ ತೆರೆದಿದ್ದು ಇದರಿಂದ ಸಾರ್ವಜನಿಕರಿಗೆ ಅಪಾಯ ಉಂಟಾಗುವ ಸಾಧ್ಯತೆಗಳಿದ್ದು, ಇದಕ್ಕೆ ಬೀಗದ ವ್ಯವಸ್ಥೆಯನ್ನು ಕಲ್ಪಿಸಲು ಕೋರಿರುತ್ತಾರೆ.</td></tr>
<tr><td></td><td>(iii) ವಾರ್ಡಿನ ವಿವಿಧ ರಸ್ತೆಗಳ ಬದಿ ಮರದ ಕೊಂಬೆಗಳು ವಿದ್ಯುತ್ ತಂತಿಗಳಿಗೆ ಚಾಚುತ್ತಿದ್ದು, ಸದರಿ ಮರದ ಕೊಂಬೆಗಳನ್ನು ಪರಿಶೀಲಿಸಿ ಕಡಿತಗೊಳಿಸಲು ಕೋರಿರುತ್ತಾರೆ.</td></tr>
<tr><td></td><td>(iv) 3ನೇ ಹಂತ, ಸುರಭಿನಗರ, ಆರ್ಯ ಹಂಸ ಗ್ರಾಂಡೆ, ರಾಯಲ್ ಕೌಂಟಿ ಬಡಾವಣೆ ಹಾಗೂ ಹಿಮಗಿರಿ ಮೆಡೋಸ್ ಬಡಾವಣೆಗಳಲ್ಲಿ ದುರಸ್ಥಿಗೊಂಡಿರುವ ಬೀದಿ ದೀಪಗಳನ್ನು ಸರಿಪಡಿಸುವ ಕುರಿತು.</td><td>ವಾರ್ಡ್ ಅಭಿಯಂತರರು ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರಿಂದ ದುರಸ್ಥಿಪಡಿಸಲು ಸೂಚಿಸಲಾಯಿತು.</td></tr>
<tr><td>4.</td><td colspan="2">ವಾರ್ಡ್ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳ ಪ್ರಗತಿಯ ಬಗ್ಗೆ</td></tr>
<tr><td></td><td>ವಾರ್ಡ್‌ನ ಅಭಿಯಂತರರು 2020-21ನೇ ಸಾಲಿನ ಬಿಬಿಎಂಪಿ ಆಯವ್ಯಯದ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವಾರ್ಡ್ ನಂ.194 ಗೊಟ್ಟಿಗೆರೆ ವ್ಯಾಪ್ತಿಯಲ್ಲಿ ಕೆಳಕಂಡ ಕಾಮಗಾರಿಗಳಿಗೆ ಜಾಬ್ ಸಂಕೇತ ಪಡೆಯುವ ಕುರಿತು ಸಭೆಯಲ್ಲಿ ವಿವರಿಸಿದರು.
<table>
<tr><th>Sl No</th><th>Ward No</th><th>Name of Work</th><th>Estimated Cost in lakhs</th></tr>
<tr><td>1</td><td>194</td><td>COMPLETION OF BALANCE WORKS OF NEW BUILDINGS IN WARD 194 GOTTIGERE</td><td>60.00</td></tr>
<tr><td>2</td><td>194</td><td>IMPROVEMENTS OF ROADS AND DRAINS IN VENKATESHWARA LAYOUT IN WARD 194 GOTTIGERE</td><td>60.00</td></tr>
<tr><td>3</td><td>194</td><td>IMPROVEMENTS OF ROADS AND DRAINS IN VENKATESHWARA LAYOUT NEAR BDA LAYOUT IN</td><td>60.00</td></tr>
</table></td><td>ವಿವಿಧ ಬಡಾವಣೆಯ ಸ್ಥಳೀಯ ಸಂಘ ಸದಸ್ಯರು ತಮ್ಮ ಬಡಾವಣೆಯಲ್ಲಿರುವ ಬೋರ್‌ವೆಲ್ ದುರಸ್ಥಿ ಹಾಗೂ ಪಾತ್‌ಹೋಲ್ ಗಳ ಮಾಹಿತಿಯನ್ನು ನೀಡುವುದಾಗಿ ಹಾಗೂ ಮುಂಬರುವ ಬೇಸಿಗೆ ಕಾಲದಲ್ಲಿ ಅವಶ್ಯಕತೆಯಿರುವ ಕಡೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಕ್ರಮಕೈಗೊಳ್ಳಬಹುದಾಗಿ ತಿಳಿಸಿದರು.</td></tr>
</table>

Scanned by CamScanner

| | | | |
|---|---|---|---|
| | | WARD 194 GOTTIGERE | |
| 4 | 194 | ENGAGING OF TRACTOR AND LABOUR FOR MAINTENANCE OF WARD NO 194 GOTTIGERE | 25.00 |
| 5 | 194 | MAINTENANCE OF BOREWELLS IN WARD NO 194 GOTTIGERE | 25.00 |
| 6 | 194 | FILLING OF POT HOLES IN WARD NO 194 GOTTIGERE | 21.00 |
| 7 | 194 | PROVIDING DRINKING WATER SUPPLY THROUGH TANKERS AT GOTTIGERE AND SURROUNDING AREA IN WARD NO 194 | 35.00 |

ಸದರಿ ಪ್ರಸ್ತಾವನೆಯ ಬಗ್ಗೆ ನಿಯಮಾನುಸಾರ ಮುಂದಿನ ಕ್ರಮವಹಿಸಲು ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು.

| | | |
|---|---|---|
| 5. | ಘನತ್ಯಾಜ್ಯ ನಿರ್ವಹಣೆ ಕುರಿತು. | |
| | (i) ಹೆಚ್.ಎಮ್ ವರ್ಲ್ಡ್ ಸಿಟಿ ಅಪಾರ್ಟ್‌ಮೆಂಟ್ ಅಕ್ಕಪಕ್ಕದಲ್ಲಿ ಆಗುತ್ತಿರುವ ತೆರೆದ ಮಲವಿಸರ್ಜನೆಯನ್ನು ತಡೆಗಟ್ಟಲು ಕೋರಿರುತ್ತಾರೆ. | ಆರೋಗ್ಯ ಪರಿವೀಕ್ಷಕರು ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ವಹಿಸುವುದು ಹಾಗೂ ಸದರಿ ಸ್ಥಳದಲ್ಲಿ ಸಾರ್ವಜನಿಕರ ಶೌಚಾಲಯವನ್ನು ನಿರ್ಮಾಣಿಸಲು ಸೂಕ್ತ ವಿವರಗೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು. |
| | (ii) ಗಾರ್ಮೆಂಟ್ಸ್ ಹಾಗೂ ಚಿಕ್ಕಿ ಫ್ಯಾಕ್ಟರಿಯ ಅಕ್ಕಪಕ್ಕ ಕಸ ಎಸೆಯುತ್ತಿರುವುದನ್ನು ತಡೆಗಟ್ಟುವ ಬಗ್ಗೆ. | ಆರೋಗ್ಯ ಪರಿವೀಕ್ಷಕರು ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ವಹಿಸುವುದು. |
| 6. | ಮಳೆ ನೀರು ಚರಂಡಿ | |
| | (i) 2ನೇ ಅಡ್ಡರಸ್ತೆ ಸುರಭಿನಗರದಲ್ಲಿ ರಾಜಕಾಲುವೆಯನ್ನು ದುರಸ್ಥಿಪಡಿಸುವ ಬಗ್ಗೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಸ್.ಡಬ್ಲ್ಯೂ.ಡಿ) ರವರು ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು. |

ಈ ಮೇಲೆ ತಿಳಿಸಿರುವ ಎಲ್ಲಾ ವಿಷಯ/ಸಮಸ್ಯೆಗಳನ್ನು ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಡ್ಡಾಯವಾಗಿ ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ: 194,

ಪ್ರತಿಯನ್ನು:-

Scanned by CamScanner

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಗೊಟ್ಟಿಗೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, BWSSB, ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
7. ಸಹಾಯಕ ನಿರ್ದೇಶಕರು (ಪಶುಪಾಲನೆ), ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
8. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೊಮ್ಮನಹಳ್ಳಿ) ವಲಯ ಬಿಬಿಎಂಪಿ.
9. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
10. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಬಿಬಿಎಂಪಿ
11. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ ಬಿಬಿಎಂಪಿ.
12. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಬಿಬಿಎಂಪಿ.
13. ತೋಟಗಾರಿಕೆ ಅಧೀಕ್ಷಕರು, ಬೊಮ್ಮನಹಳ್ಳಿ ವಲಯ.
14. ಆರೋಗ್ಯ ವೈದ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
15. ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ.
16. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ.
17. ಸಹಾಯಕ ಕಂದಾಯ ಅಧಿಕಾರಿ ಅಂಜನಾಪುರ ವಿಭಾಗ.
18. ಕಲ್ಯಾಣಾಧಿಕಾರಿಗಳು ಬೊಮ್ಮನಹಳ್ಳಿ ವಲಯ.
19. ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
20. ಪೋಲೀಸ್ ಇನ್ಸ್‌ಪೆಕ್ಟರ್, ಹುಳಿಮಾವು ಮತ್ತು ಕೋಣನಕುಂಟೆ ಪೋಲೀಸ್ ಠಾಣೆ.
21. ಕಂದಾಯ ಅಧಿಕಾರಿಗಳು, ಅಂಜನಾಪುರ ಉಪ ವಲಯ.
22. ಸ್ಥಳೀಯ ನಾಗರಿಕ ಕಲ್ಯಾಣ ಸಂಸ್ಥೆಗಳು.

Scanned by CamScanner